**<u>ಸಾಕ್ಷಿಗೆ ದಿನಾಂಕಃ 04.09.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>**

**<u>ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀ.RKB ರವರಿಂದಃ</u>**

1) ನಾನು ಈ ಪ್ರಕರಣದಲ್ಲಿ ಅರ್ಜಿದಾರಳಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಬದಲಾಗಿ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಗೆ ಅನುಸಾರವಾಗಿ ನಮ್ಮ ವಕೀಲರು ಸಿದ್ಧಪಡಿಸಿದ್ದಾರೆ.

2) **<u>ಸೂಚನೆಃ</u>** ಇದೇ ರಸ್ತೆ ಅಪಘಾತದಲ್ಲಿ ನನ್ನ ಗಂಡ ಆದಂತಹ ಪೊನುಗುಂಟಿ ನವೀನ್ ಕುಮಾರ್ ರವರು ಸಹಾ ಗಾಯಗೊಂಡಿದ್ದರು ಮತ್ತು ನಂತರ ಮರಣ ಹೊಂದಿದ್ದಾರೆ, ಆ ಸಂಬಂಧವಾಗಿ ಎಂ.ವಿ.ಸಿ.**5841/2024** ಎಂಬ ಪ್ರಕರಣವನ್ನು ಮಾಡಲಾಗಿದೆ, ಮತ್ತು ಆ ಪ್ರಕರಣದಲ್ಲಿ ಪೋಲಿಸ್ ದಾಖಲೆಗಳನ್ನು ಮತ್ತು ಸಿಸಿಃ**27471/2024** ಪ್ರಕರಣದ ಆದೇಶದ ಹಾಳೆಯನ್ನು ಹಾಜರುಪಡಿಸಲಾಗಿದೆ. ಆ ದಾಖಲೆಗಳನ್ನೂ ಸಹಾ ಈ ಪ್ರಕರಣದಲ್ಲಿಯೂ ಪರಿಗಣನೆಗೆ ತೆಗೆದುಕೊಳ್ಳಬೇಕಾಗಿ ಪ್ರಾರ್ಥಿಸುತ್ತೇನೆ.

3) ಗಾಯದ ಪ್ರಮಾಣ ಪತ್ರವನ್ನು ನಿ.ಪಿ.**1** ಎಂದು ಗುರುತಿಸಿದೆ.

4) **Cura** ಆಸ್ಪತ್ರೆಗೆ ನಾನು ದಾಖಲಾಗಿದ್ದೆನು ಮತ್ತು ಆ ಬಗ್ಗೆ ಇರುವ ದಾಖಲೆಯನ್ನು ನಿ.ಪಿ.**2** ಎಂದು ಗುರುತಿಸಿದೆ.

5) **ಡಿಸ್ಚಾರ್ಜ್ ಸಮ್ಮರಿ ಅನ್ನು** ನಿ.ಪಿ.**3** ಎಂದು ಗುರುತಿಸಿದೆ.
**ಸೂಚನೆ:** ನಿ.ಪಿ.**3** ದಾಖಲೆಯು ಒಟ್ಟು **3** ಹಾಳೆಗಳನ್ನು ಒಳಗೊಂಡಿದೆ.

6) ಕೆಎ-**03**-ಹೆಚ್ ಕ್ಯೂ-**4013** ವಾಹನಕ್ಕೆ ಸಂಬಂಧಿಸಿದ **B Register Extract** ಅನ್ನು ನಿ.ಪಿ.**4** ಎಂದು ಗುರುತಿಸಿದೆ.

7) ಮೆಡಿಕಲ್ ಬಿಲ್ ಹಾಜರುಪಡಿಸಿದ್ದು ಅದನ್ನು ನಿ.ಪಿ.**5** ಎಂದು ಗುರುತಿಸಿದೆ.
**ಸೂಚನೆ:** ನಿ.ಪಿ.**5** ದಾಖಲೆಯು ಒಟ್ಟು **7** ಹಾಳೆಗಳನ್ನು ಒಳಗೊಂಡಿದೆ.

8) ಆದ ಕಾರಣದಿಂದ ಪ್ರಾರ್ಥನೆಯಂತೆ ನನಗೆ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,

ಬೆಂಗಳೂರು.